**RR + PR**

ಸಂಕೇತ ಸಂಖ್ಯೆ : **62-K** ವಿಷಯ : **ತೃತೀಯ ಭಾಷೆ — ಕನ್ನಡ**

**Code No. : 62-K Subject : Third Language — KANNADA**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : 15 × 1 = 15

1. ಇದರ ವಿವರಣೆ ಮುಂದಿನಂತಿದೆ ಎಂದು ಸೂಚಿಸುವಾಗ ಬಳಸುವ ಲೇಖನ ಚಿಹ್ನೆ

(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ

(ಸಿ) ಉದ್ಧರಣ (ಡಿ) ವಿವರಣಾತ್ಮಕ

2. 'ಸಹಸ್ರ' ಪದದ ತದ್ಭವ ರೂಪ

(ಎ) ಸಾವಿರ (ಬಿ) ಲಕ್ಷ

(ಸಿ) ನೂರು (ಡಿ) ಸಾಸುವೆ

3. 'ಬೀಳು' ಪದದ ನಿಷೇದಾರ್ಥಕ ರೂಪ

(ಎ) ಬೀಳುತ್ತಿದೆ (ಬಿ) ಬೀಳದು

(ಸಿ) ಬೀಳಬಹುದು (ಡಿ) ಬಿದ್ದಿದೆ

4. 'ಅರ್ಥ' ಪದದ ವಿರುದ್ಧಾರ್ಥಕ ರೂಪ

(ಎ) ದ್ವಂದ್ವಾರ್ಥ (ಬಿ) ಆಕಸ್ಮಿಕ

(ಸಿ) ಸಹಾಯಾರ್ಥ (ಡಿ) ಅನರ್ಥ

5. ಇವುಗಳಲ್ಲಿ ಅನುಕರಣಾವ್ಯಯ ಪದ ಗುರುತಿಸಿ

(ಎ) ಊರೂರು (ಬಿ) ಸರಸರ

(ಸಿ) ಊರುಕೇರಿ (ಡಿ) ಕಂಬನಿ

6. 'ದಾಸ್ಯವನ್ನು' ಈ ಪದವು ಯಾವ ಸಂಧಿಗೆ ಉದಾಹರಣೆ

(ಎ) ಲೋಪ ಸಂಧಿ (ಬಿ) ಆದೇಶ ಸಂಧಿ

(ಸಿ) ಆಗಮ ಸಂಧಿ (ಡಿ) ವೃದ್ಧಿ ಸಂಧಿ

7. 'ಕವಿ' ಪದದ ಅನ್ಯಲಿಂಗ ರೂಪ

(ಎ) ಕವಯಿತ್ರಿ (ಬಿ) ಲೇಖಕ

(ಸಿ) ವಿಮರ್ಶಕ (ಡಿ) ನಿರ್ದೇಶಕ

8. 'ಮಗು' ಪದದ ಬಹುವಚನ ರೂಪ

(ಎ) ಮಗುಗಳು (ಬಿ) ಮಕ್ಕಳು

(ಸಿ) ಹುಡುಗರು (ಡಿ) ಮಗಳು

9. ಕ್ರಿಯಾ ಪದದ ಮೂಲರೂಪ

(ಎ) ಸರ್ವನಾಮ (ಬಿ) ಧಾತು

(ಸಿ) ವ್ಯಂಜನ (ಡಿ) ನಾಮ ಪ್ರಕೃತಿ

10. 'ಭಳೆಗಾರ' ಈ ಪದದ ಶುದ್ಧರೂಪ

(ಎ) ವಚನಗಾರ (ಬಿ) ಮೊಸಗಾರ

(ಸಿ) ಭಳೆಗಾರ್ತಿ (ಡಿ) ಬಳೆಗಾರ

11. 'ಓದಿದನು' ಈ ಕ್ರಿಯಾ ಪದವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿದಾಗ ಆಗುವ ರೂಪ

(ಎ) ಓದುತ್ತಾನೆ (ಬಿ) ಓದುವನು

(ಸಿ) ಓದನು (ಡಿ) ಓದಿಯಾನು

12. 'ಸತಿ' ಪದದ ಸಮಾನಾರ್ಥಕ ಪದ

(ಎ) ಪತಿ (ಬಿ) ಹೆಂಡತಿ

(ಸಿ) ಗೆಳತಿ (ಡಿ) ಸ್ನೇಹಿತೆ

13. ಛಂದಶ್ಶಾಸ್ತ್ರದಲ್ಲಿ 'ಗುರ' ಚಿಹ್ನೆಗೆ ಎಷ್ಟು ಮಾತ್ರೆಯ ಬೆಲೆಯಿದೆ ?

(ಎ) ನಾಲ್ಕು (ಬಿ) ಒಂದು

(ಸಿ) ಶೂನ್ಯ (ಡಿ) ಎರಡು

14. 'ಭಾರತದಲ್ಲಿ' ಇಲ್ಲಿರುವ ವಿಭಕ್ತಿ ಪ್ರತ್ಯಯ

(ಎ) ಅ (ಬಿ) ಅನು

(ಸಿ) ಇಂದ (ಡಿ) ಅಲ್ಲಿ

15. ಒಂದು ಪೂರ್ಣಕ್ರಿಯಾ ಪದದಿಂದ ಕೂಡಿದ್ದು ಸ್ವತಂತ್ರವಾಗಿರುವ ವಾಕ್ಯವೇ

(ಎ) ಮಿಶ್ರ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ದ್ವಂದ್ವ ವಾಕ್ಯ

16. ಈ ಕೆಳಗಿನ ***'ಅ' ಪಟ್ಟಿ***ಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು ***'ಬ' ಪಟ್ಟಿ***ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| ***'ಅ' ಪಟ್ಟಿ*** | | ***'ಬ' ಪಟ್ಟಿ*** | |
|---|---|---|---|
| i) | ದ್ವಿರುಕ್ತಿ | ಅ) | ವಕೀಲ |
| ii) | ಅನುಕರಣಾವ್ಯಯ ಪದ | ಆ) | ಮನೆಮಠ |
| iii) | ರೂಪಕಾಲಂಕಾರ | ಇ) | ಸಿಂಗ |
| iv) | ಅನ್ವರ್ಥಕನಾಮ | ಈ) | ಕಂಬನಿ |
| v) | ಜೋಡಿಪದ | ಉ) | ರೇನ್ ಸೆಂಟರ್ |
| | | ಊ) | ನಗುವೆಂಬ ಪರದೆ |
| | | ಋ) | ಊರೂರು |
| | | ಎ) | ಸರಸರ |

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಕಾಸಿದ್ದರೆ ................................ .

18. ಭರತ ಭೂತಳಕೆ ಸಿಂಗಾರವಾದ ಪುರ ................................ .

19. ಶ್ರೀ ಕೃಷ್ಣದೇವರಾಯನ ಪ್ರಧಾನಿ ................................ .

20. ಬೆಳ್ಳಗಿರುವುದೆಲ್ಲ ................................ .

21. ಬಡವರ ಜೀವನ ................................ ಸ್ವತ್ತು.

ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8

22. ಬೆಂಕಿ ಉರಿಯುವುದನ್ನು ಬಿಟ್ಟು ಭರತ ಕುಮಾರನಿಗೆ ಏನೆಂದು ಹೇಳಿತು ?

23. ದಂಡಿ ಎಂದರೇನು ?

24. ಬಿ.ವಿ. ಕಾರಂತರು ಬುಂದೇಲಿ ಭಾಷೆಯಲ್ಲಿ ಪ್ರಯೋಗಿಸಿದ ನಾಟಕ ಯಾವುದು ?

25. ತಗಡೂರು ರಾಮಚಂದ್ರ ರಾಯರು ಮಾರಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದುದು ಏಕೆ ?

26. ಗಾಂಧೀಜಿ ಯಾವುದರ ಸೂತ್ರಧಾರ ?

27. ತವರೂರಿಗೆ ಬಳೆಗಳನ್ನು ತೆಗೆದುಕೊಂಡು ಹೋಗು ಎಂದು ಬಾಲೆ ಬಳೆಗಾರನಿಗೆ ಹೇಳಲು ಕಾರಣವೇನು ?

28. ಯುಗಾದಿ ಬಂದು ಹೋದರು ಯಾರ ಬಸಿರು ತುಂಬಲಿಲ್ಲವೆಂದು ಹೊರೆಯಾಲ ದೊರೆಸ್ವಾಮಿಯವರು ಹೇಳಿದ್ದಾರೆ ?

29. ನಾ. ಮೊಗಸಾಲೆಯವರು ಯಾರೊಡನೆ ತಿರುಪತಿಗೆ ಹೋದರು ?

ಈ ಕೆಳಗಿನ ಪ್ರಶ್ನೆಗಳಿಗೆ ***ಎರಡು–ಮೂರು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30

30. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

31. ಲಕ್ಷ್ಮಣಿಗೆಯ ಜನ್ಮ ರಹಸ್ಯದ ಬಗ್ಗೆ ವಿಚಾರ ಮಾಡಿ ಬಳಿಕ ಯಮುನಾಮೂರ್ತಿಯವರು ಸಮಾಧಾನ ಪಟ್ಟುಕೊಂಡದ್ದು ಹೇಗೆ ?

32. ಕೇದಾರ ಏರುವಾಗ ಕುದುರೆಯವನು ಲೀಲಾವತಿ ಎಸ್. ರಾವ್‌ರವರಿಗೆ ಏನೆಂದು ಸಲಹೆ ಕೊಟ್ಟನು ?

33. ಮೈಸೂರಿನಲ್ಲಿ 'ರೆಪರ್ಟರಿ' ಆರಂಭಗೊಂಡ ಸನ್ನಿವೇಶವನ್ನು ಕುರಿತು ಬರೆಯಿರಿ.

34. ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆ ಏನು ?

35. ತಗಡೂರು ರಾಮಚಂದ್ರರಾಯರನ್ನು 'ಛೋಟಾ ಗಾಂಧಿ' ಎಂದು ಏಕೆ ಕರೆದಿದ್ದಾರೆ ?

36. ಜಲಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯಲು ಕಾರಣವೇನು ?

37. ಮಳೆಕೊಯ್ಲಿನ ಉಪಯೋಗ ಯಾರ್‍ಯಾರು ಹೇಗೆ ಪಡೆದಿದ್ದಾರೆ ಎಂದು ಶೇಖರ ಹೇಳಿದನು ?

38. ತೀ.ನಂ.ಶ್ರೀಯವರು ಗಾಂಧೀಜಿಯವರನ್ನು ಪವಾಡ ಪುರುಷರೆಂದು ಕರೆಯಲು ಕಾರಣವೇನು ?

39. ಬಾಲೆ ತನ್ನ ತವರೂರಿಗೆ ಯಾವ ಬಳೆಗಳನ್ನು ತೆಗೆದುಕೊಂಡು ಹೋಗಲು ತಿಳಿಸಿದಳು. ಏಕೆ ?

40. ತೋರಿಸು ಬಾರೆ ತವರೂರ ಎಂದು ಬಳೆಗಾರ ಬಾಲೆಗೆ ಹೇಳಿದನು. ಏಕೆ ?

41. ವಿ.ಕೃ. ಗೋಕಾಕರು ಹಡಗನ್ನು ಸಂಕ್ಷಿಪ್ತ ಬ್ರಹ್ಮಾಂಡ ಎಂದು ಏಕೆ ಕರೆದಿದ್ದಾರೆ ?

42. ವಿ.ಕೃ. ಗೋಕಾಕರು ಹಡಗನ್ನು ನವಖಂಡ ಎಂದು ಕರೆಯಲು ಕಾರಣವೇನು ?

43. ಆ ಹಿರಿಯರು ನಾ. ಮೊಗಸಾಲೆಯವರಿಗೆ 'ಅನಬೇಡಿ ಇಲ್ಲ' ಎಂದು ಹೇಳಲು ಕಾರಣವೇನು ?

44. ದಾಸರು ಮನುಷ್ಯರಿಗೆ ಏನೆಂದು ಎಚ್ಚರಿಕೆ ನೀಡುತ್ತಾರೆ ?

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಮತ್ತು ಸ್ವಾರಸ್ಯವನ್ನು ಬರೆಯಿರಿ : $4 \times 3 = 12$

45. "ಉಪಾಯವಿಲ್ದೆ ಇದ್ರೆ ಅಪಾಯವೇ"

46. "ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ."

47. "ಪಂಪ ಮಹಾಚಲ ಜೋಡಿ ಶಿಖರಗಳು"

48. "ಕರ್ಪೂರವ ಸುಟ್ಟರೆ ಭಸ್ಮವುಂಟೆ" ?

49. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 3 = 3$

ಸುಳಿಮಿಂಚಿನ ______________________

______________________

______________________

______________________ ರತ್ನಾಕರನ ಕೆರೆ.

***ಅಥವಾ***

ಕಣ್ಣು ಕೈಕಾಲ್ ______________________

______________________

______________________

______________________ ಸಿಕ್ಕಲು ಬೇಡಿ.

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

50. — ಭರತ ಕುಮಾರ ತನ್ನ ತಾಯಿಯನ್ನು ಭೂಮಿಯ ಮೇಲೆ ಕಂಡುಕೊಂಡ ಬಗೆ ಹೇಗೆ ? ವಿವರಿಸಿ.
— ಮರಿಗೌಡರ ಸಾಧನೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

51. — ಕೇದಾರವನ್ನು ಏರುವ ದಾರಿಯ ಪ್ರಕೃತಿಯ ವೈಭವವನ್ನು ಸಂಗ್ರಹಿಸಿ ಬರೆಯಿರಿ.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಒಂದು*** ಪ್ರಶ್ನೆಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಧ್ಯಾನದ ಮಹತ್ವವನ್ನು ವಚನಕಾರರು ಹೇಗೆ ನಿರೂಪಿಸಿದ್ದಾರೆ ?

— 'ಗಾಂಧೀಜಿ ಸರ್ವೋದಯದ ಸೂತ್ರಧಾರ' ಈ ಮಾತಿನ ಮಹತ್ವವನ್ನು ತಿಳಿಸಿ.

53. ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಪದ್ಮಶ್ರೀ' ಎಂದು ಭಾವಿಸಿಕೊಂಡು, ಅನಾರೋಗ್ಯದ ನಿಮಿತ್ತ ಮೂರು ದಿನಗಳ ರಜೆ ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯ ಶಿಕ್ಷಕರಿಗೆ ಒಂದು ಮನವಿಪತ್ರ ಬರೆಯಿರಿ. $1 \times 5 = 5$

***ಅಥವಾ***

ನಿಮ್ಮನ್ನು ಧಾರವಾಡ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಶಿವಕುಮಾರ್ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವವನ್ನು ಕುರಿತು ಬೆಂಗಳೂರಿನಲ್ಲಿರುವ ಜಗದೀಶನಿಗೊಂದು ಪತ್ರವನ್ನು ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದನ್ನು*** ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಸ್ವತಂತ್ರ್ಯ ದಿನಾಚರಣೆಯ ಮಹತ್ವ

— ದೂರದರ್ಶನದಿಂದ ದೊರೆಯುವ ಪ್ರಯೋಜನಗಳು

— ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು